ಶಿವಮೊಗ್ಗ ಜಿಲ್ಲೆಯ ಹೊಸನಗರದ ನಂಜವಳ್ಳಿಯ ಕಾಡಂಚಿನಲ್ಲಿ ಒಂದು ಕೆರೆಯಿದೆ. ಇದು ‘ಪೀಟಿ ಕೆರೆ’ ಎಂದು ಪರಿಚಿತವಾಗಿದೆ. ಮಲೆನಾಡಿನಲ್ಲಿ ‘ಏರೋಪ್ಲೇನ್ ಚಿಟ್ಟೆ’ಗೆ ಪೀಟಿ ಹುಳುವೆಂಬ ಹೆಸರು. ಮಳೆಗಾಲದ ಹೊತ್ತು ಇವುಗಳ ಹಾರಾಟದ ದಂಡು ನೋಡಿ ಕೆರೆಗೆ ಹೆಸರು ಬಂದಿರಬಹುದೇನೋ! ಆದರೆ ವಾಸ್ತವಿಕವಾಗಿ ಊರ ಎತ್ತರದ ಮಳೆ ನೀರ ನಿಲ್ದಾಣ ಈ ಇಂಗುಕೆರೆ! ‘ಪರ್ಕ್ಯುಲೇಶನ್ ಟ್ಯಾಂಕ್’ ಎಂಬ ಆಂಗ್ಲ ಪದ ಕೆರೆ ದಾಖಲೆಯಲ್ಲಿ ಪಿ.ಟಿ. ಕೆರೆಯೆಂದು ನಮೂದಾಗಿ ಜನಪದರ ಪೀಟಿ ಕೆರೆ ಈಗೀಗ ಪಟ್ಟಾ ಕೆರೆಯೂ ಆಗಿದೆ. ಕೆರೆ ನೋಡಲು ವರ್ಷದ ಹಿಂದೆ ಹೋಗಿದ್ದೆ, ದಾರಿ ತಪ್ಪಿ ಆಟದ ಬಯಲಿಗೆ ಬಂದಂತೆ ಕಾಣುತ್ತಿತ್ತು. ಅಲ್ಲಲ್ಲಿ ಹುಲ್ಲು ಬೆಳೆದಿದ್ದರಿಂದ ದನ ಮೇಯುವ ತಾಣವೂ ಆಗಿತ್ತು. ದಂಡೆಯಲ್ಲಿ ನಿಂತು ತಗ್ಗಿನ ಕೃಷಿ ಭೂಮಿ ನೋಡಿದರೆ ನೀರಿಲ್ಲದೇ ಸೊರಗಿತ್ತು. ಊರ ಎತ್ತರದ ಈ ನೀರ ನೆಲೆ ಹಲವು ವರ್ಷಗಳಿಂದ ಹೂಳು ತುಂಬುತ್ತ ಊರನ್ನು ಜಲಕ್ಷಾಮದ ಮಡುವಿನಲ್ಲಿ ನಿಲ್ಲಿಸಿತ್ತು.

### ಕೆರೆ ಪುನಶ್ಚೇತನವೆಂದರೆ ಹೂಳು ತೆಗೆಯುವುದು ಮಾತ್ರವೇ?

ಕಡು ಬೇಸಿಗೆಯಲ್ಲಿ ಕೃಷಿ ಸೋತು, ಕುಡಿಯುವ ನೀರಿಗೂ ತತ್ವಾರವಾಗಿ ಕೊಳವೆ ಬಾವಿ ಕೊರೆಸುತ್ತ ಹಳ್ಳಿಗರು ಆಳದಲ್ಲಿ ನೀರು ಹುಡುಕುತ್ತಿದ್ದರು. ಹೂಳು ತೆಗೆದರೆ ನೀರಿನ ಸಮಸ್ಯೆಗೆ ಪರಿಹಾರವಿತ್ತು; ಆದರೆ ಕೆರೆ ಕೆಲಸ ಹಳ್ಳಿಗರಿಂದ ಮಾತ್ರ ಸಾಧ್ಯವೇ? ಕೆಲಸ ಎಲ್ಲಿಂದ ಆರಂಭಿಸಬೇಕೆಂದು ಗೊತ್ತಿರಲಿಲ್ಲ. ಹಳ್ಳಿಯಲ್ಲಿ ಪ್ರಗತಿಬಂಧು ಸಂಘ, ಸ್ವಸಹಾಯ ಸಂಘಗಳಿಂದ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಚಟುವಟಿಕೆಯಿತ್ತು. ಇವರು ಕೆರೆ ಕಾಯಕ ಮಾಡುತ್ತಿರುವುದು ತಿಳಿದಿತ್ತು. ಕೆರೆ ಪುನರುಜ್ಜೀವನ ಕಾರ್ಯಕ್ಕೆಗೊಳ್ಳಲು ಸಂಸ್ಥೆಗೆ ಅರ್ಜಿ ಸಲ್ಲಿಸಿದರು. ಸಂಸ್ಥೆಯ ಕಾರ್ಯಕರ್ತರು ಕೆರೆ ವೀಕ್ಷಿಸಿ ಪುನರುಜ್ಜೀವನಕ್ಕೆ ಸಂಘಟನಾತ್ಮಕ ಪ್ರಯತ್ನ ಶುರು ಮಾಡಿದರು. ಗ್ರಾಮಸ್ಥರು, ಜನಪ್ರತಿನಿಧಿಗಳ ಸಹಕಾರದಿಂದ ನಂಜವಳ್ಳಿ ಗ್ರಾಮದ ಪೀಟಿ ಕೆರೆ ಅಭಿವೃದ್ಧಿ ಸಮಿತಿ ರಚನೆಯಾಯ್ತು. ಅಭಿಯಂತರರಿಂದ ವಿಸ್ತ್ರತ ಯೋಜನೆ ರೂಪುಗೊಂಡಿತು. ಈ ವರ್ಷದ ಜನವರಿಯಲ್ಲಿ ಕೆಲಸ ಶುರುವಾಯ್ತು. ಟಿಪ್ಪರ್, ಹಿಟಾಚಿ, ಜೆಸಿಬಿ ಯಂತ್ರಗಳ ಸಾಲು ಜಮಾಯಿಸಿದವು. ಫಲವತ್ತಾದ ಮಣ್ಣನ್ನು ತೋಟಕ್ಕೆ ಸಾಗಿಸಲು ರೈತರು ಟ್ರ್ಯಾಕ್ಟರ್ ತಂದರು. ಹಬ್ಬದ ಉತ್ಸಾಹ ಗರಿಗೆದರಿ ಎರಡು ತಿಂಗಳ ಸಮಯದಲ್ಲಿ 50 ವರ್ಷಗಳಿಂದ ಹಾಳುಬಿದ್ದ ಕೆರೆ ಮರುಜೀವ ಪಡೆಯಿತು. ಈಗ ನೋಡಿದರೆ ವಿಶಾಲ ಕೆರೆಯ ತುಂಬ ನೀರೇ ನೀರು, ಕೆರೆ ಕೋಡಿ ಬಿದ್ದು ಹರಿಯುತ್ತಿದೆ. ಸಂತಸ ಇಮ್ಮಡಿಸಿದೆ, ಪ್ರವಾಸಿ ತಾಣದ ಸೊಬಗು ಮೇಳೈಸಿದೆ.

ಧರ್ಮಸ್ಥಳ ಸಂಸ್ಥೆಯ ನೆರವು, ಜನರ ವಂತಿಗೆಯಿಂದ 22.82 ಲಕ್ಷ ರೂಪಾಯಿಯಲ್ಲಿ ನಂಜುವಳ್ಳಿಯ 8 ಎಕರೆ ಕೆರೆ ಕೆಲಸವಾಗಿದೆ. 40 ಸಾವಿರ ಕ್ಯುಬಿಕ್ ಮೀಟರ್ ಹೂಳು ತೆಗೆದು ದಂಡೆ ಎತ್ತರಿಸಿದ ಪರಿಣಾಮ ಅಂದಾಜು 4 ಕೋಟಿ ಲೀಟರ್ ನೀರು ಸಂಗ್ರಹವಾಗಿದೆ. ಅಂತರ್ಜಲ ಹೆಚ್ಚಳ, ಕೃಷಿ, ಜಾನುವಾರು, ಮೀನುಗಾರಿಕೆ,




ಚಿಕ್ಕನಾಯಕನಹಳ್ಳಿಯ ಯಳಂದೂರು ಕೆರೆ ಪುನಶ್ಚೇತನಕ್ಕೆ ಕೈ ಜೋಡಿಸಿದ ರೈತ ಸಮೂಹ.